**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 309 |
| ಸದಸ್ಯರ ಹೆಸರು | : | ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 11.12.2024 |
| ಉತ್ತರಿಸುವ ಸಚಿವರು | : | ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ವಕ್ಫ್ ಮಂಡಳಿ ಹೆಸರಿನಲ್ಲಿ ದಾಖಲಾಗಿರುವ ಜಮೀನಿನ ವಿಸ್ತೀರ್ಣ ಎಷ್ಟು: (ತಾಲ್ಲೂಕು, ಗ್ರಾಮ, ಸರ್ವೆ ನಂಬರ್ ಮತ್ತು ವಿಸ್ತೀರ್ಣದ ವಿವರವನ್ನು ನೀಡುವುದು) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ವಕ್ಫ್ ಮಂಡಳಿ ಹೆಸರಿನಲ್ಲಿ ದಾಖಲಾಗಿರುವ ಜಮೀನುಗಳ ಮಾಹಿತಿಯನ್ನು ಇದರೊಂದಿಗೆ ಲಗತ್ತಿಸಿರುವ ಸಿ.ಡಿ.ಯಲ್ಲಿ ನೀಡಲಾಗಿದೆ. |
| ಆ) | ಸದರಿ ಜಿಲ್ಲೆಗಳಲ್ಲಿ ವಕ್ಫ್ ಮಂಡಳಿಗಳಿಗೆ ಯಾವ ವರ್ಷದಲ್ಲಿ ಜಮೀನು ಮಂಜೂರಾತಿ ಅಥವಾ ಮ್ಯುಟೇಷನ್ ಆಗಿದೆ (ಮಾಹಿತಿಯನ್ನು ನೀಡವುದು) | ಸದರಿ ಆಸ್ತಿಗಳು ವಕ್ಫ್ ಕಾಯ್ದೆ 1954 ರ ಕಲಂ 4 ರಡಿಯಲ್ಲಿ ಕರ್ನಾಟಕ ರಾಜ್ಯದಲ್ಲಿರುವ ವಕ್ಫ್ ಆಸ್ತಿಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ನೇಮಿಸಿದ್ದಂತಹ ಸರ್ವೇ ಆಯುಕ್ತರ ಮತ್ತು ಸಹಾಯಕ ಸರ್ವೇ ಆಯುಕ್ತರ ಮೇಲ್ವಿಚಾರಣೆಯಲ್ಲಿ ಸರ್ವೇ ಕಾರ್ಯ ನಡೆದಿದ್ದು, ಸದರಿಯವರು ಸಲ್ಲಿಸಿದಂತಹ ವಕ್ಫ್ ಆಸ್ತಿಗಳ ಸರ್ವೇ ವರದಿಯನ್ನು ಆಧರಿಸಿ ಕಲಂ 5 ರಡಿಯಲ್ಲಿ ರಾಜ್ಯಪತ್ರದಲ್ಲಿ ವಕ್ಫ್ ಆಸ್ತಿಗಳಾಗಿ ಅಧಿಸೂಚನೆ ಹೊರಡಿಸಲಾಗಿರುತ್ತದೆ.<br><br>ಸದರಿ ಆಸ್ತಿಗಳು ಸ್ವತಂತ್ರ ಪೂರ್ವದಿಂದ ಇನಾಂ, ದಾನ ಹಾಗೂ ಗ್ರಾಂಟ್ ರೂಪದಲ್ಲಿ ಮತ್ತು ತಲೆತಲಾಂತರದಿಂದ (ಮಸೀದಿ, ದರ್ಗಾ, ಖಬರಸ್ತಾನ್, ಆಶೂರ ಖಾನಾ, ಮುಸಾಫಿರ್ ಖಾನಾ, ಅನಾಥಾಶ್ರಮ ಮತ್ತು ಇತರೆ ಧಾರ್ಮಿಕ್ ಸ್ಥಳಗಳು) ರೂಢಿಗತವಾಗಿ ಬಳಕೆ ಆಗುತ್ತಿರುವ ಆಸ್ತಿಗಳು ವಕ್ಫ್ ಆಸ್ತಿಗಳಾಗಿರುತ್ತವೆ. |

**ಸಂಖ್ಯೆ: MWD-LMQ/222/2024**

(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು